# ಕರ್ನಾಟಕ ವಿಧಾನ ಪರಿಷತ್

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : (106) 36
**ಸದಸ್ಯರ ಹೆಸರು** : ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
**ಉತ್ತರಿಸುವ ದಿನಾಂಕ** : 09.12.2024
**ಉತ್ತರಿಸುವವರು** : ಮಾನ್ಯ ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯ ಅರಣ್ಯೀಕರಣ ಯೋಜನೆಗೆ ನಿಗಧಿ ಪಡಿಸಲಾದ 347.13ಕೋಟಿ ರೂ.ಗಳನ್ನು ರಾಷ್ಟ್ರೀಯ ಪರಿಹಾರಾರ್ಥ ಅರಣ್ಯೀಕರಣ ನಿಧಿಗೆ ವರ್ಗಾಯಿಸಿರುವುದರಿಂದ ರಾಜ್ಯ ಅರಣ್ಯ ಯೋಜನೆಗೆ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಮೊತ್ತವನ್ನು ವರ್ಗಾಯಿಸುವ ಮೂಲಕ ರಾಜ್ಯದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದ ಅಧಿಕಾರಿಯ ಮೇಲೆ ಯಾವ ಕ್ರಮಕೈಗೊಳ್ಳಲಾಗಿದೆ; (ವಿವರ ನೀಡುವುದು) | ವಿವಿಧ ಉಪಯೋಗಿ ಸಂಸ್ಥೆಯವರು ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಗಳಿಗೆ ಬಿಡುಗಡೆ ಮಾಡಿದ ಸಂದರ್ಭಗಳಲ್ಲಿ ನೀಡಿದ ಪರಿಹಾರತ್ಮಕ ಮತ್ತು ನಿವ್ವಳ ಮೌಲ್ಯದ ಹಣವನ್ನು ಕೇಂದ್ರ ಕಾಂಪಾ ಖಾತೆಗೆ ಜಮಾ ಮಾಡಿ ಕೇಂದ್ರ ಸರ್ಕಾರದಿಂದ ಅನುಮೋದಿತ ವಾರ್ಷಿಕ ಕಾರ್ಯನಿರ್ವಹಣಾ ಯೋಜನೆಯನ್ವಯ ಕೇಂದ್ರದಿಂದ ಹಂಚಿಕೆ ಮಾಡಿ ಬಿಡುಗಡೆಯಾದ ಹಣವನ್ನು ರಾಜ್ಯ ಅರಣ್ಣೀಕರ ಕಾಮಗಾರಿಗಳಿಗೆ ಬಳಸಿಕೊಳ್ಳಲಾಗುತ್ತಿದೆ. ಪ್ರಸಕ್ತ 2024-25ನೇ ಸಾಲಿಗೆ ರೂ.275.60 ಕೋಟಿಗಳ ಯೋಜನೆಗೆ ಅನುಮೋದನೆಗೊಂಡಿರುತ್ತದೆ. |
| (ಆ) | ರಾಜ್ಯ ಅರಣ್ಯೀಕರಣ ಯೋಜನೆಯ ಅನ್ವಯ ಕಳೆದ 5 ವರ್ಷಗಳಲ್ಲಿ ಮಾಡಲಾದ ವೆಚ್ಚವೆಷ್ಟು; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯ ಪರಿಹಾರಾತ್ಮಕ ನೆಡುತೋಪು ನಿಧಿ ನಿರ್ವಹಣೆ ಮತ್ತು ಯೋಜನಾ ಪ್ರಾಧಿಕಾರ (ಕಾಂಪಾ) ಯೋಜನೆಯಡಿ ಜಿಲ್ಲಾವಾರು ಕಳೆದ 5 ವರ್ಷಗಳಲ್ಲಿ ಭರಿಸಿದ ವೆಚ್ಚದ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ. |
| (ಇ) | ಭೂಮಿಯ ಯಾವುದೋ ಕಾಲಘಟ್ಟದಲ್ಲಿ ಯಾರೋ ನೆಟ್ಟ ಮರಗಳನ್ನು ಅಥವಾ ತಾನಾಗಿಯೇ ಬೆಳೆದ 50 ರಿಂದ 100 ವರ್ಷಗಳ ಹಳೆಯ ಮರಗಳನ್ನು ಕಡಿಯಲು ಅನುಮತಿ ನೀಡಲು ಕಾರಣವೇನು; ಮರವನ್ನು ನೆಟ್ಟು ಬೆಳೆಸಿದವರಿಗೆ ಮಾತ್ರವೇ ಮರವನ್ನು ಕಡಿಯಲು ಹಕ್ಕು ಎಂಬುದಾಗಿ ಯಾವಾಗ ಕಾನೂನು ಜಾರಿಗೊಳಿಸಲಾಗುತ್ತದೆ? | ಕೇಂದ್ರ ಸರ್ಕಾರದಿಂದ ಮಂಜೂರಾದ ಕಾರ್ಯ ಯೋಜನೆ ಪ್ರಕಾರ ಅರಣ್ಯ ಪ್ರದೇಶದ ಹಳೆಯ ಮರಗಳನ್ನು ಕಟಾವಣೆ ಮಾಡಲಾಗುತ್ತಿದೆ ಮತ್ತು ಅರಣ್ಯೇತರ ಕೃಷಿ ಜಮೀನಿನಲ್ಲಿ ಬೆಳೆದ ಮರಗಳನ್ನು ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ 1976ರಂತೆ ಕ್ರಮ ಕೈಗೊಳ್ಳಲಾಗುತ್ತಿದೆ. |

**ಸಂಖ್ಯೆ: ಅಪಜೀ 43 ಎಫ್ ಟಿಎಸ್ 2024**

(**ಈಶ್ವರ ಬಿ.ಖಂಡ್ರೆ**)
ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು